# ಪ್ರಧಾನ ಸಿವಿಲ್ ಜಡ್ಜ್ ವ ಪ್ರ.ದ.ನ್ಯಾ. ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ

**ಸಿ.ಸಿ.ನಂ.ಃ 611-2013**

ಸಿ.ಡಬ್ಲೂಃ3
ಪಿ.ಡಬ್ಲೂಃ2

ಸಾಕ್ಷಿದಾರರ ಹೆಸರು : ಶ್ರೀಧರ ಸುಕ್ರಪ್ಪ ನಾಯ್ಕ
ತಂದೆಯಃಗಂಡನ ಹೆಸರು : ಸುಕ್ರಪ್ಪ
ವಯಸ್ಸು : 29 ವರ್ಷ
ಉದ್ಯೋಗ : ಟೆಂಪ್ಪೋ ಕ್ಲಿನರ್
ವಾಸ್ತವ್ಯ : ಬಾಡಾ ತಾಃಕುಮಟಾ

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋದಿಸಲಾಯಿತು. ದಿನಾಂಕಃ 25-11-2015.

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದ ಃ -

ಸಾಕ್ಷಿಯು ಗಟನಾ ಸ್ಥಳದ ಪಂಚನಾಮೆಯಲ್ಲಿ ಇರುವ ತನ್ನ ಸಹಿ ಗುರುತಿಸಿದ್ದರಿಂದ ಸಾಕ್ಷಿ ಸಹಿಯನ್ನು ನಿಪಿ 1 ಬಿ ಎಂದು ಗುರುತಿಸಲಾಯಿತು. ಆ ದಾಖಲೆಗೆ ಸಹಿಯನ್ನು ದಿನಾಂಕಃ 25-12-2012 ರಂದು ಸಂಜೆ ಮಾರುಕಟ್ಟೆಗೆ ಹೋಗುತ್ತಿದ್ದಾಗ ನಾಗದೇವಿ ರಸ್ತೆಯ ಬಳಿ ಚಂದ್ರಕಲಾರವರ ಮನೆಯ ಬಳಿ ಪೊಲಸ'ೀರು ಮಹಜರ ಕ್ರಮ ಜರುಗಿಸುತ್ತಿದ್ದರು ಆ ಸಮಯದಲ್ಲಿ ನಾನು ಆ ದಾಖಲೆಗೆ ಸಹಿ ಹಾಕಿರುತ್ತೇನೆ. ಆರೋಪಿತರು ಪಿರ್ಯಾದುದಾರರಿಂದ ಕೆಲಸವನ್ನು ಕೊಡಿಸುತ್ತೇನೆ ಎಂದು ನಂಬಿಸಿ ಹಣ ಮತ್ತು ಬಂಗಾರವನ್ನು ಪಡೆದಕೊಂಡು ಮೋಸಮಾಡಿರುವ ವಿಚಾರದಲ್ಲಿ ಆ ದಾಖಲೆಯನ್ನು ತಯಾರಿಸಿರುತ್ತಾರೆ. ಆ ಸಮಯದಲ್ಲಿ ನನ್ನ ಜೊತೆಗೆ ಚಾಸಾ 2 ಕೂಡಾ ಹಾಜರಿದ್ದರು. ಪೊಲೀಸರಿಗೆ ಸ್ಥಳವನ್ನು ಚಾಸಾ 1 ರವರು ತೋರಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

ಪಂಚನಾಮೆಗೆ ಸಹಿಯನ್ನು ಹಾಕುವ ಪೂರ್ವದಲ್ಲಿಅದನ್ನು ನಾನು ಓದಿ ತಿಳಿದುಕೊಂಡಿಲ್ಲಾ. ಪೊಲೀಸರು ಅದನ್ನು ನಾನು ಮಾರುಕಟ್ಟೆಗೆ ಹೋಗುವ ಸಂದರ್ಭದಲ್ಲಿ ಬರೆದಿರುತ್ತಾರೆ. ಅವರು ಸಹಿ ಹಾಕು ಎಂದು ಹೇಳಿದ ಮೇರೆಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ನಾನು ಮಾರುಕಟ್ಟೆಗೆ ಅಜಮಾಸು 4-45-5-00 ಗಂಟೆಗೆ ಹೋಗುತ್ತಿದ್ದೆ. ನಾನು ಪ್ಯಾಸೇಜರ್ ಟೆಂಪ್ಪೋ ಕ್ಲಿನರ್ ಆಗಿ ಕೆಲಸಮಾಡುತ್ತಿದ್ದೇನೆ. ಪ್ಯಾಸೇಜರ್ ಟೆಂಪೋದ ಪ್ರಯಾಣಿಕರ ಕ್ಯಾಪೇಸಿಟ್ 12+1 ಇದ್ದು ನಮ್ಮ ಚಾಲಕರು ಅದನ್ನು ಮೀರಿ ಹೆಚ್ಚಿನ ಪ್ರಯಾಣಿಕರನ್ನು ತುಂಬಿಸಿ ಹೊನ್ನಾವರದಿಂದ ಕುಮಟಾಕ್ಕೆ ಚಲಾಯಿಸುತ್ತಾರೆ ಎಂದರೆಸರಿ. ಟೆಂಪ್ಪೋ ಮಾಲಕರ ಮತ್ತು ಚಾಲಕರ ಸಂಘವಿರುತ್ತದೆ. ಟೆಂಪೋ ಚಾಲಕ ಮಾಲಕರ ಸಂಘದ ಪದಾಧಿಕಾರಿಗಳು ಆಗಾಗ ಪೋಲೀಸ್ ಠಾಣೆಗೆ ಮಾತುಕತೆಗೆ ಹೋಗುತ್ತಾರೆ ಮತ್ತು ಅವರ ಜೊತೆಗೆ

ಕೆಲವೊಂದು ಬಾರಿ ನಾವು ಹೋಗುತ್ತೇವೆ ಎಂದರೆ ಸರಿ. ಪೋಲೀಸರ ಮಾತನ್ನು ಒಪ್ಪದಿದ್ದ ಸಮಯದಲ್ಲಿ ನಮ್ಮ ವಾಹನದ ಮೇಲೆ ಮತ್ತು ನಮ್ಮ ಮೇಲೆ ಪ್ರಕರಣ ದಾಖಲುಮಾಡುವ ಸಾದ್ಯತೆ ಕೂಡಾ ಇರುತ್ತದೆ ಎಂದರೆ ಸರಿ. ಮಹಜರಿಗೆ ನಾನು ಪೊಲೀಸರ ಬೆದರಿಕೆಗೆ ಮತ್ತು ಮುಲಾಜಿಗೆ ಒಳಪಟ್ಟು ನಾನು ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲಾ. ಸಾಕ್ಷಿಯು ತಾನು ಆ ಕಾಲಕ್ಕೆ ಟೆಂಪೋದ ಕ್ಲಿನರ್‌ಆಗಿ ಕೆಲಸ ನಿರ್ವಹಿಸುತ್ತಿರಲಿಲ್ಲಾ ಎಂದು ನುಡಿಯುತ್ತಾರೆ. ಪೊಲೀಸರಿಂದ ಮಾಹಿತಿಯನ್ನು ಪಡೆದುಕೊಂಡು ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲಾ. ಮೀನುಮಾರುಕಟ್ಟೆಯಿಂದ ನಾಗದೇವಿ ರಸ್ತೆಯು ಸ್ವಲ್ಪದೂರದಲ್ಲಿ ಇರುತ್ತದೆ. ನಾನು ಸಹಿ ಮಾಡಿದಂತಹ ಸ್ಥಳವು ಮೀನುಮಾರುಕಟ್ಟೆಯು ಸುಮಾರು 100 ಮೀಟರ್ ದೂರದಲ್ಲಿ ಇದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ನಾನು ಪೊಲೀಸರು ಮತ್ತು ಚಾಸಾ 1 ರ ಪ್ರಭಾವಕ್ಕೆ ಒಳಗಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲಾ.

<u>ಮರು ವಿಚಾರಣೆಃ</u> ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಜೆ.ಎಂ.ಎಫ್.ಸಿ. ಕುಮಟಾ.